ಸಾಕ್ಷಿಯನ್ನು ದಿ:21.03.2022 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಪಿ.ಡಬ್ಲ್ಯೂ-2

**ಪಾಟೀಸವಾಲುಃ- ಪ್ರತಿವಾದಿ ಪರ ವಕೀಲರಿಂದ ಃ-**

1. ನಾನು ಪಿಯುಸಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಪ್ರತಿವಾದಿ ವಾದಿಯ ಮೇಲೆ ದಾವೆ ಹಾಕಿರುತ್ತಾರೆ ಎಂದರೆ ಗೊತ್ತಿಲ್ಲ. ದಾವಾ ಆಸ್ತಿಯ ದಕ್ಷಿಣಕ್ಕೆ ರಸ್ತೆ ಇರುತ್ತದೆ. ದಾವಾ ಆಸ್ತಿಯ ಪೂರ್ವ-ಪಶ್ಚಿಮ: 40 ಅಡಿ ಇರುತ್ತದೆ. ಉತ್ತರ-ದಕ್ಷಿಣ: 99 ಅಡಿ ಬರುತ್ತದೆ. ವಾದಿ 3 ಗುಂಟೆ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ. ದಾವಾ ಆಸ್ತಿಯ ಕಲ್ಲಿನ ಆರ್ ಶೀಟಿನಿಂದ ಉತ್ತರಕ್ಕೆ 25 ಅಡಿ ಜಾಗ ಶೆಟ್ಟಿಹಳ್ಳಿ ಓಣಿಯ ಕಡೆವರೆಗೆ ಇರುತ್ತದೆ ಎಂದರೆ ಸರಿ. ಸದರಿ 25 ಅಡಿ ಜಾಗಕ್ಕೆ ಸಂಬಂಧಪಟ್ಟಂತೆ ಪ್ರತಿವಾದಿಯು ಮನೆ ಕಟ್ಟಲು ಪರವಾನಿಗೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ 25 ಅಡಿ ಜಾಗ ಪ್ರತಿವಾದಿಗೆ ಸೇರಿದ ಜಾಗ ಎಂದರೆ ಸರಿಯಲ್ಲ. 3 ಗುಂಟೆಗೆ ಎಷ್ಟು ಚದರ ಅಡಿ ಬರುತ್ತದೆ ಎಂದು ನನಗೆ ಗೊತ್ತಾಗುವುದಿಲ್ಲ.

2. ವಾದಿಯು ವೀರರಾಘವೇಂದ್ರರವರಿಂದ ದಾವಾ ಆಸ್ತಿ ಕ್ರಯಕ್ಕೆ ಪಡೆದುಕೊಂಡಿರುತ್ತಾರೆ. ದಾವಾ ಆಸ್ತಿಯು ಪೂರ್ವ-ಪಶ್ಚಿಮ: 33 ಅಡಿ ಬದಲಾಗಿ 40 ಅಡಿ ಇರುತ್ತದೆ ಎಂದರೆ ಸರಿ. ಪ್ರತಿವಾದಿಯು ತನಗೆ ಸೇರಿದ ಆಸ್ತಿ ಪರವಾನಿಗೆ ಪಡೆದು ಕಟ್ಟಡ ಕಟ್ಟಲು ಮುಂದಾದಾಗ ವಾದಿ ಮತ್ತು ಪ್ರತಿವಾದಿಯ ಮಧ್ಯೆ ಗಲಾಟೆಯಾಗಿರುತ್ತದೆ ಎಂದರೆ ಸರಿ. ಸದರಿ ಪ್ರತಿವಾದಿಯ ಜಾಗಕ್ಕೆ ಸಂಬಂಧಪಟ್ಟಂತೆ ಪ್ರತಿವಾದಿಯು ವಾದಿಯ ವಿರುದ್ಧ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ಪ್ರತಿವಾದಿಗೆ ಸೇರಿದ ಆಸ್ತಿಯಲ್ಲಿ ಕಲ್ಲುಗಳನ್ನು ಪ್ರತಿವಾದಿ ಶೇಖರಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಯು ಪ್ರತಿವಾದಿಗೆ ಸೇರಿದ ಆಸ್ತಿಯನ್ನು ಲಪಟಾಯಿಸಲು ಉತ್ತರದ ಕಡೆಗೆ ತಪ್ಪು ಚೆಕ್ಕುಬಂದಿ ನಮೂದು ಮಾಡಿ ಸುಳ್ಳು ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ-1 ರಲ್ಲಿಯೂ ಸಹ ಉತ್ತರದ ಚೆಕ್ಕುಬಂದಿಯು ಪ್ರತಿವಾದಿಯ ಸ್ವತ್ತು ಇದೆ ಎಂದು ಹೇಳಲಾಗಿದೆ ಎಂದರೆ ಸರಿಯಲ್ಲ.

3. ಪ್ರತಿವಾದಿಯು ತಾನು ಮನೆ ಕಟ್ಟಲು ನಕ್ಷೆಯನ್ನು ಸಹ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಮತ್ತು ವಾದಿ ಸ್ನೇಹಿತರು ಎಂದರೆ ಸರಿ. ವಾದಿಗೆ ಅನುಕೂಲವಾಗಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಯು ವಾದಿಯ ಸ್ವಾಧೀನಕ್ಕೆ ತೊಂದರೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

1 ನೇ ಅಪರ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ
ಮಳವಳ್ಳಿ.